

# ಪುಟಾಣಿ ಮಕ್ಕಳ ನುಡಿ ಶುಭ್ರ ಮನಸ್ಸಿನ ಕನ್ನಡಿ

**ಮಕ್ಕಳ ಮನಸ್ಸು ತಿಳಿನೀರಿನಂತೆ. ಅದನ್ನು ಬಗ್ಗಡಗೊಳಿಸದಂತೆ ನೋಡಿಕೊಳ್ಳುವುದು ಹಿರಿಯರ ಜವಾಬ್ದಾರಿ.**

■ ಸ್ವಯಂಪ್ರಭಾ

ಕೃಷ್ಣಪ್ಪನ ಮನೆಯಲ್ಲಿ ಅವತ್ತು ದೈವಾರಾಧನೆ ಇತ್ತು. ತಾವು ಆರಾಧಿಸುವ ದೈವಕ್ಕೆ ಕುಟುಂಬದವರ ಜೊತೆ ಸೇರಿ ನೈವೇದ್ಯ ನೀಡುವ ಪುಟ್ಟ ಆರಾಧನೆಯದು. ಮನೆಗೆ ನೆಂಟರು ಬಂದಿದ್ದರಿಂದ ಕೃಷ್ಣಪ್ಪನ ಮಗ ರಾಹುಲನಿಗೆ ಬಹಳ ಖುಷಿ. ಐದು ವರ್ಷದ ಮುದ್ದು ಮಗು ಅವನು. ಅವನತ್ತ ಪ್ರಶ್ನೆಗಳನ್ನು ಎಸೆದು, ಅವನು ಹೇಳುವ ಮುದ್ದು ಉತ್ತರಗಳನ್ನು ಮೊಗೆದುಕೊಂಡು ಚಪ್ಪರಿಸುವುದು ಎಂದರೆ ಎಲ್ಲರಿಗೂ ಇಷ್ಟ.

ಮಕ್ಕಳಿಗೆ ಸಾಮಾನ್ಯವಾಗಿ ಬಾಲ್ಯದಲ್ಲಿ ಪ್ರಾಣಿ ಪಕ್ಷಿಗಳ ಮೇಲೆ ಬಹಳಷ್ಟು ಪ್ರೀತಿ. ನಿಷ್ಕಲ್ಮಶ ಹೃದಯದ ಪ್ರೀತಿ ಅವರಲ್ಲಿ ತುಂಬಿರುತ್ತದೆ. ರಾಹುಲ್ ಹಿಂದಿನ ವರ್ಷ ಭೂತಾರಾಧನೆ ಸಂದರ್ಭದಲ್ಲಿ ಕೋಳಿ ಬಲಿ ಕೊಡುವುದನ್ನು ನೋಡಿ ಕಿಟಾರನೆ ಕಿರುಚಿದ್ದ. ನಂತರದ ದಿನಗಳಲ್ಲಿ ಅವನು ಮನೆಯಲ್ಲಿದ್ದ ಎಲ್ಲ ಕೋಳಿಗಳ ಕ್ಷೇಮ ವಿಚಾರಿಸುತ್ತಿದ್ದ. ಕೋಳಿಗಳು ಎಲ್ಲಿ ಹೋದವು, ಯಾರು ಖರೀದಿಸಿಕೊಂಡು ಹೋದರು, ಕೋಳಿ ಮರಿಗಳನ್ನು ಗಿಡುಗ ಯಾಕೆ ಕಚ್ಚಿಕೊಂಡು ಹೋಗಿ ಅಷ್ಟೆತ್ತರದ ಆಕಾಶದಲ್ಲಿ ಹಾರಾಡುತ್ತದೆ ಎಂಬುದನ್ನೆಲ್ಲ ಭಾರೀ ಆಸ್ಥೆಯಿಂದ ಗಮನಿಸುತ್ತಿದ್ದ. ಅಪ್ಪ ಅಮ್ಮನ ಬಳಿ ಪ್ರಶ್ನೆಗಳ ಸುರಿಮಳೆಗೈಯ್ಯುತ್ತಿದ್ದ. ಅವನ ಪ್ರಶ್ನೆಗಳ ಸೂಕ್ಷ್ಮತೆಗೆ ಹೆದರಿದ ಕೃಷ್ಣಪ್ಪ, ತಮ್ಮ ಮನೆಯಲ್ಲಿ ದೈವಾರಾಧನೆಯ ಶಾಸ್ತ್ರಕ್ಕಷ್ಟೇ ಕೋಳಿ ನೈವೇದ್ಯ ನೀಡುತ್ತಿದ್ದರು. ಉಳಿದಂತೆ ನೆಂಟರಿಷ್ಟರು ಬಂದಾಗ ಊಟಕ್ಕಾಗಲೀ, ಇತರ ಸಮಾರಾಧನೆಗಾಗಲೀ ಅಂಗಡಿಯಿಂದಲೇ ಕೋಳಿ ತರಲಾರಂಭಿಸಿದರು.

***

ಹತ್ತನೇ ತರಗತಿಯಲ್ಲಿ ಓದುವ ಸನ್ನಿಧಿ ಕಳೆದ ವರ್ಷ ಶಾಲೆಯಿಂದ ಮನೆಗೆ ಬರುವ ದಾರಿಯಲ್ಲಿ ಸಿಕ್ಕಿದ ಒಂದು ಬೆಕ್ಕಿನ ಮರಿ ಹಿಡಿದುಕೊಂಡು ಮನೆಗೆ ಬಂದಳು. ದಪ್ಪ ಬಾಲದ, ಚುರುಕು ಕಣ್ಣಿನ ಬೆಕ್ಕು. ಮೀ ಮೀ... ಎಂದು ಸಂಗೀತ ಧ್ವನಿ ಹೊರಡಿಸುತ್ತಲೇ ಇರುವ ಬೆಕ್ಕಿನ ಹಿಂದೆಯೇ, ಟುಪುಕ್ ಟುಪುಕ್ ಎಂದು ಸನ್ನಿಧಿ ಕೂಡ ಓಡುತ್ತ ಖುಷಿಯಾಗಿದ್ದಳು. ಎಲ್ಲವೂ ಚೆನ್ನಾಗಿಯೇ ಇತ್ತು. ಆದರೆ ಬೆಕ್ಕು ದೊಡ್ಡದಾಗುತ್ತಿದ್ದಂತೆಯೇ, ಸನ್ನಿಧಿಯ ಅಮ್ಮನಿಗೆ ಎಲ್ಲರೂ ಕಿವಿಮಾತು ಹೇಳಲು ಶುರು ಮಾಡಿದರು. “ಬೆಕ್ಕಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿ. ಇಲ್ಲವಾದರೆ ಮೂರು ತಿಂಗಳಿಗೊಮ್ಮೆ ಮರಿ ಹಾಕಿ, ಮನೆ ತುಂಬಾ ಮರಿಗಳಾಗಿಬಿಡುತ್ತವೆ.’’ ಅಮ್ಮನಿಗೂ ಈ ಕಿವಿಮಾತು ನಿಜವೆನಿಸಿತು. ಸುಮ್ಮನೇ ಮರಿಗಳ ಸಹವಾಸ ಯಾಕೆಂದು ಶಸ್ತ್ರಚಿಕಿತ್ಸೆಯ ಮಾಹಿತಿ ಹುಡುಕುತ್ತ, ಆ ಸೌಲಭ್ಯ ಎಲ್ಲಿ ಲಭ್ಯವಿದೆ ಎಂಬ ಬಗ್ಗೆ ಪರಿಚಯಸ್ಥರಲ್ಲಿ ವಿಚಾರಿಸಲು ಶುರು ಮಾಡಿದರು.

ಆದರೆ ಸನ್ನಿಧಿ ಮಾತ್ರ ಶಸ್ತ್ರಚಿಕಿತ್ಸೆ ಮಾಡಿಸುವುದು ಬೇಡ ಎಂದು ಮಾತು ಶುರು ಮಾಡಿದಳು. ಅಮ್ಮನಿಗೆ ಅಚ್ಚರಿ! ‘ಅರೆ... ಎಷ್ಟು ಬೆಕ್ಕುಗಳು ಬೇಕು ನಿನಗೆ. ನೀ ತಂದ ಬೆಕ್ಕು ಸಾಕುವುದಲ್ಲದೆ, ನಾನು ಅದರ ಬಾಣಂತನ ಬೇರೆ ಮಾಡಬೇಕೇನು?’ ಎನ್ನುತ್ತ ಕಣ್ಣುಕಿರಿದು ಮಾಡಿ ಮಗಳನ್ನು ದಬಾಯಿಸಲು ಶುರು ಮಾಡಿದರು. ಆದರೆ ಸನ್ನಿಧಿ ಮಾತನಾಡಲಿಲ್ಲ. ಅಮ್ಮನ ಸಿಟ್ಟು ಕಡಿಮೆಯಾದ ಮೇಲೆ ಅಮ್ಮನೊಡನೆ ಮಾತು ಶುರು ಮಾಡಿದಳು. ‘ಅಮ್ಮಾ... ಬೆಕ್ಕಿಗೂ ಮರಿ ಹಾಕಬೇಕು ಅಂತ ಆಸೆ ಇರಬಹುದು. ಯಶೋದ ಆಂಟಿ ನೋಡು, ಒಂದಾದರೂ ಮಗು ಬೇಕು ಅಂತ ಹೇಳುತ್ತಿದ್ದುದು. ನಮ್ಮ ಬೆಕ್ಕು ಹಾಗೆಯೇ ಅಲ್ವ. ಒಂದು ಸರ್ತಿ ಮರಿ ಹಾಕಲಿ ಪಾಪ. ಆಮೇಲೆ ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಿಸೋಣ’.

ತನಗೆ ಗೊತ್ತಿಲ್ಲದಂತೆಯೇ ಮಗಳು ಏನೆಲ್ಲ ಕಲಿತಿದ್ದಾಳಪ್ಪಾ ಎನ್ನುತ್ತಾ ಅಮ್ಮ ವಿಸ್ಮಯಗೊಂಡರು. ಬೆಕ್ಕು ಒಮ್ಮೆ ಮರಿ ಹಾಕಲಿ ಎಂಬ ಅವಳ ಮಾತು, ಯಾವುದೋ ಭಾಷಣವನ್ನು ಕೇಳಿದ ಪ್ರಭಾವದಿಂದ ಹೊರಬಂತೋ ಅಥವಾ ಅವಳು ಅಷ್ಟೊಂದು ಆಳವಾಗಿ ಯೋಚನೆ ಮಾಡಿದಳೋ ಯಾರಾದರೂ ಹೇಳಿಕೊಟ್ಟರೋ ಗೊತ್ತಿಲ್ಲ. ಆದರೆ ಅವಳ ಸಲಹೆಯು ಪ್ರತಿವಾದ ಬೆಳೆಸುವಂಥದ್ದಾಗಿರಲಿಲ್ಲ. ತನ್ನ ಮುದ್ದಿನ ಬೆಕ್ಕಿಗೆ ಪುಟ್ಟ ಮರಿಗಳನ್ನು ಕಚ್ಚಿಕೊಂಡು ಓಡಾಡುವ ಖುಷಿ ಸಿಗಲಿ ಎಂಬ ಅವಳ ಹಾರೈಕೆ ಕಂಡು ಅಮ್ಮನಿಗೆ ಖುಷಿಯೂ ಆಯಿತು.

ಬಾಲ್ಯದಲ್ಲಿ ಎಲ್ಲ ಮಕ್ಕಳ ಹೃದಯ ಪ್ರಾಂಜಲವಾಗಿರುತ್ತದೆ. ಎಲ್ಲ ಮಕ್ಕಳೂ ದಯೆ, ಕರುಣೆ, ಪ್ರೀತಿಗೆ ಆದ್ಯತೆ ನೀಡುವ ಇಂತಹ ನಡವಳಿಕೆಗಳನ್ನು ವ್ಯಕ್ತಪಡಿಸಿರುತ್ತಾರೆ. ಅದನ್ನು ಗುರುತಿಸುವುದು ಮುಖ್ಯವಷ್ಟೇ. ಹುಳುಕು, ಕೆಡುಕು, ಮೋಸ ಮುಂತಾದ ಮಸಿಯ ಕಲೆಗಳು ಅಂಟಿರದ ಶುಭ್ರವಾದ ಮನಸ್ಸು ಅವರದಾಗಿರುತ್ತದೆ.

ಅವರು ಬೆಳೆಯುತ್ತಿದ್ದಂತೆಯೇ ಸಮಾಜದಲ್ಲಿ ಕಾಣುವ ಅನುಕೂಲಸಿಂಧು ಪ್ರವೃತ್ತಿಗಳು, ಸ್ವಾರ್ಥಕ್ಕಾಗಿ ಮಾಡುವ ಹೊಂದಾಣಿಕೆಗಳು ಅವರ ಸ್ವಭಾವವನ್ನು ಬದಲಾಯಿಸುತ್ತವಷ್ಟೇ.

ಪ್ರತಿಕ್ರಿಯಿಸಿ: feedback@sudha.co.in